ಎಂ.ವಿ.ಸಿ. 199/2024
ಆರ್‌ಡಬ್ಲ್ಯೂ : 02

ದಿನಾಂಕ 11-03-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ 3 ನೇ ಎದುರುದಾರರ ಪರ ಶ್ರೀ ಡಿ. ಬಿ. ಎಸ್ ವಕೀಲರಿಂದಃ**

ನಾನು 3 ನೇ ಎದುರುದಾರರ ಕಂಪನಿಯಲ್ಲಿ ಡಿ. ಎಂ ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ಆ ಅರ್ಹತೆಯಲ್ಲಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿ.ಆರ್-1 | ಕೆಎ 51 ಎಫ್ 7423 ವಾಹನಕ್ಕೆ ಸಂಬಂದಿಸಿದ ವಿಮಾ ಪಾಲಿಸಿಯ ಯಥಾಪ್ರತಿ |
| ನಿ.ಆರ್-2 | ಅಪರಾದ ಕ್ರಮಾಂಕ 200/2023 ರ ಅಂತಿಮ ವರದಿಯ ಯಥಾಪ್ರತಿ |
| ನಿ.ಆರ್-3 | ಮೋಟಾರ್ ವಾಹನ ಕಾಯ್ದೆಯ ಕಲಂ 133 ರ ಅಡಿಯಲ್ಲಿ ನೀಡಿದ ನೋಟೀಸಿಗೆ ನೀಡಿದ ಉತ್ತರದ ಪ್ರತಿ |
| ನಿ.ಆರ್-4 | ನೋಟೀಸಿನ ಕಚೇರಿ ಪ್ರತಿ |
| ನಿ.ಆರ್-5 | ನೋಂದಾಯಿತ ಅಂಚೆ ಸ್ವೀಕೃತಿ |

ಅದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಎಂ.ವಿ.ಸಿ. 199/2024
ಆರ್‌ಡಬ್ಲ್ಯೂ : 02

**ಪಾಟೀ ಸವಾಲು - ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ..ಹಿ.ಸಿ.ನ್ಯಾ ಉಡುಪಿ.